ಈ) ೬-೨-೧೯೮೬ರ ರಾಜ್ಯ ಪತ್ರ ೬-೨-೧೯೮೬ ರಂದೇ ಪ್ರಕಟವಾಗಿದೆ ಹಾಗೂ ೧೩-೨-೮೬ರ ರಾಜ್ಯ ಪತ್ರ ೧೩-೨-೧೯೮೬ ರಂದೇ ಪ್ರಕಟವಾಗಿದೆ.

ಸಂಡೂರು ತಾಲ್ಲೂಕಿನ ತೋಟಿಗಾರಿಕೆ ಇಲಾಖೆಯಲ್ಲಿ ನಡೆದ ಅವ್ಯವಹಾರದ ಬಗ್ಗೆ.

೬೬೮. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ತೋಟಗಾರಿಕೆ ಇಲಾಖೆಯಲ್ಲಿ ಸುಮಾರು ೬.೦೦.೦೦೦. ರೂ. ಗಳ ಅವ್ಯವಹಾರ ನಡೆದಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಹಣದ ಅಪವ್ಯಯ ಕಂಡು ಬಂದಿದೆ.

ಆ) ಈ ವಿಚಾರದಲ್ಲಿ ಪೂರ್ಣ ತನಿಖೆ ಮಾಡುವ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಕುಂದಾಪುರ ತಾಲ್ಲೂಕಿನಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ವಿತರಣೆ ಬಗ್ಗೆ.

೭೬೦. ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಎಷ್ಟು ಶಾಲೆಗಳಲ್ಲಿ ಉಚಿತ ಸಮವಸ್ತ್ರಗಳನ್ನು ವಿತರಣೆ ಮಾಡಲಾಗಿದೆ ?

ಆ) ಹಾಗೆ ವಿತರಣೆ ಮಾಡದಿದ್ದಲ್ಲಿ ಎಂದು ವಿತರಣೆ ಮಾಡಲಾಗುವುದು ?

ಇ) ರಾಜ್ಯದಲ್ಲಿ ೨ನೇ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?

ಈ) ಇವರಿಗೆಲ್ಲಾ ಉಚಿತ ಸಮವಸ್ತ್ರ ವಿತರಣೆ ಮಾಡಲಾಗಿದೆಯೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಒಟ್ಟು ೨೬೭ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿರುವ ಫಲಾನುಭವಿ ಮಕ್ಕಳಿಗೆ ದಿನಾಂಕ. ೧೪-೧೧-೧೯೮೫ ರಂದು ತಲಾ ಒಂದು ಜೊತೆಗೆ ಸಮವಸ್ತ್ರ ವಿತರಣೆ ಮಾಡಲಾಗಿದೆ.

ಆ) ಎರಡನೇ ಜೊತೆ ಸಮವಸ್ತ್ರವನ್ನು ಫಲಾನುಭವಿ ಮಕ್ಕಳಿಗೆ ದಿನಾಂಕ. ೨೬-೧-೧೯೮೬ರಂದು ವಿತರಣೆ ಮಾಡಿದೆ.

ಇ)	೧ ಮತ್ತು ೨ನೇ ತರಗತಿ ಗಂಡು		೧೧೨೦೮೧೯
	೧ ಮತ್ತು ೨ನೇ ತರಗತಿ ಹೆಣ್ಣು ... ... (ಸರ್ಕಾರಿ ಪ್ರಾಥಮಿಕ ಶಾಲೆ ಮೊತ್ತ		೯೫೬೭೪೨೨
		ಒಟ್ಟು	೨೦೭೭೫೬೧

ಈ) ಎರಡು ಜೊತೆ ಸಮವಸ್ತ್ರ ಕೊಡಲಾಗಿದೆ.